UNIVERSITY OF AGRICULTURAL SCIENCES, DHARWAD

ICAR - KRISHI VIGYAN KENDRA

SAIDAPUR FARM, DHARWAD -580 005

Newsletter

Volume : 16 | Issue : 2 | April-June 2017

## Celebration of "World Environment Day"

World Environment Day was celebrated at KVK, Dharwad on 05.06. 2017. On this occasion KVK staff planted various fruit crops and forest species in KVK premises. The same day, Dr. S. M. Mantur, Senior Scientist and Head, KVK, Dharwad invited as a Chief Guest by Bharat Gas LPG Plant, Hubli and he explained about importance of World Environment Day.







## Celebration of "International Yoga Day"

KVK, Dharwad celebrated International Yoga Day on 21.06.2017. Dr. S.M. Mantur, Senior Scientist and Head of KVK, Dharwad delivered the introductory remarks on the importance and concept of celebrating yoga day to the participants. Dr. Jayashree Kollolgi, Yoga Teacher explained the importance of yoga in daily life. She also demonstrated some of the yoga mudras, asanas and pranayama that help to reduce stress, anxiety and ways to maintain diabetes, hypertension, allergy problems, *etc* in everyday life. She explained students about the ways to overcome exam stress and also addressed on most commonly faced problems by women and farmers. About 20 women from Dharwad and nearby villages, 46 farmers from five districts who were participating in the two days training on "Sheep and Goat Rearing" and 30 final year B.Sc. (Ag. Maco) students of Rural **Agricultural Work Experience course**, staff of KVK also participated in the Yoga day.





## 18th Scientific Advisory Committee meeting

The 18th Scientific Advisory Committee meeting of KVK, Dharwad was held on 02.06.2017. Dr. V.I. Benagi, Director of Extension, UAS, Dharwad presided over the function and briefed about the KVK activities. Dr. Sreenath Dixit, Director, ATARI (Zone-XI), Bengaluru reviewed the activities carried out by KVK during 2016-17. Dr. S. M. Mantur, Senior Scientist and Head, KVK, Dharwad presented the progress report, action taken on previous SAC meeting proceedings and action plan for the current year. Officials from agriculture and allied departments, bank officials and farmers/ farm women representatives were actively involved and gave suggestions for overall development of KVK.





## Training on Protected Cultivation of High Value Crops

KVK, Dharwad organized training on "**Protected Cultivation of High Value Crops**" on 09.06.2017. Dr. S. M. Mantur, Head, KVK, Dharwad delivered lecture on concept of protected cultivation and its practices in Gerbera, Carnation and other important flower crops. Dr.S.M.Biradar, Assistant Professor, Department of Horticulture, UAS, Dharwad, explained about protected cultivation practices of Tomato, Capsicum, seedless Cucumber and other exotic vegetables. Kumari. Kalavati K. Kambali, Scientist (Agri. Entomology), KVK, Dharwad, delivered lecture on pest and disease prevalence and management in protected cultivation. Mr.Shivaprasad, representative of RIJK ZWAAN seeds of Netherland and Shri Santosh Torgalmath, MD, Harsharaj Agro Products (exporter of Horticulture produce) shared their experiences in marketing of produce grown under polyhouse. Visit was arranged to the demonstration units of aeroponics, hydroponics, soilless cultivation of various flowers and vegetables and cultivation with mulch and drip irrigation at Hi-Tech Horticulture unit, UAS, Dharwad. About 50 farmers from Dharwad, Gadag and Belgavi districts participated in the training programme.





## Training on "Sheep and Goat rearing"

Two days paid training on "Sheep and Goat rearing" was conducted by Dr. Jayashree Pattar Scientist (Animal Science) at KVK, Dharwad on 20-21 June 2017 in which 46 farmers, especially youth from five districts of northern Karnataka participated. They were trained on various aspects like importance of sheep and goat rearing, breeds, breed development and grading, reproduction, housing and feeding systems, hydroponic fodder, azolla as a feed, dry fodder enrichment, various diseases, first aid and vaccination schedule. Dr. Vishwanath Kulkarni, Dr. Javed Mulla, Dr. Anil Kumar G.K and Dr. Jayashree Pattar were the experts. Mrs. Sheela Bhandarkar, DGM, NABARD, Shri Ashok Sankalli, Manager explained about the Bank facilities related to animal husbandry. Filed visit to sheep and goat rearing units and fodder production unit of University of Agricultural Sciences was arranged to provide practical experience to the participants. Sri. Ishwarchandra Hosamani, Member, Board of Management, UAS, Dharwad distributed the certificates to the participants.






## Training on "Drudgery reduction equipments in agriculture"

KVK organized one day training programmes on Drudgery reduction equipments in Groundnut and Green gram crop on 29.06.2017. Dr. Vinutha U. Mukthamath Scientist (Home Science) demonstrated different drudgery reducing equipments. Dr. Anuraj (Agri. Eng.) explained farm machinery equipments. More than 50 farmers and farm women participated from different taluks of Dharwad District.






## Training on "ICM in Groundnut and Soybean production technology"

Krishi Vigyan Kendra organized one day training programme on Integrated Crop Management (ICM) in Groundnut and Soybean crop on 30.05.2017. Dr. Prasanna Kumar, B.H. Scientist (Agronomy) and Mr. Kumar, C.J. Farm Manager, KVK, Dharwad explained about seed treatment, integrated pest and disease management. More than 50 farmers were participated from different taluks of Dharwad District





## Interaction of KVK Scientists with farmers in Samagra Krishi Abhiyan 2017 and other various functions

The scientists of KVK participated as a resource person in Samagra Krishi Abhiyan programmes organized by KSDA and NGOs. at Ghanjigatti (22.06.17) by Kumari Kalavathi K Kambli (Agri Entamology) and Dr Prasannakumar B.H (Agronomy) interacted with farmers about seed treatment, alternative cropping methods, pest, disease and weed management, Dr. Vinutha U. Mukthamath (Home Science) addressed the farmers about Pradhan Mantri Fasal Bhima Yojane, food processing and value addition at Dummavad (24.06.17), Dr. Akkamahadevi Agasimani (Horticulture) and Dr. Jayashri Pattar (Animal Science) interacted with farmers about KVK activities, improved agricultural technologies, soilless cultivation and diseases management of animals in monsoon season at Madakehonnalli, Tq: Khalaghatagi, Dharwad district (28.06.17). Dr Vijaykumar.C (Soil Science), Kumari Kalavathi K, Dr.Jayashree Pattar and Dr Prasannakumar B.H, interacted with farmers about organic farming, water conservation, soil nutrition, pest control,Foot and Mouth Disease, mastitis and responded to various other problems faced by farmers during farmers and scientists interaction function held by Department of Agriculture, Tq: Khalghatagi, at Dummavad (08.05.17). Kumari Kalavathi K and Dr.Jayashree Pattar participated in "Interaction of farmers and Scientists about Alphanso mango cultivation" programme at Bellighatti (30.05.2017), organized by Karnataka mango development board Bangaluru and Indian Institute of Horticulture Reasearch Bangaluru.









## Diagnostic field visits of KVK staff

Dr. S.M. Mantur, Senior Scientist and Head, Krishi Vigyan Kendra, Dharwad and Scientist Dr. Akkamahadevi Agasimani, Scientist (Horticulture) and Miss. Kalavathi K.Kambali., Scientist (Agriculture Entomology) had a diagnostic visit to problematic fields of mango, cashew and jackfruit plots at Belligatti village of Dharwad Taluk on 07.06.2017. During this field visit suitable suggestion were given for pruning of mango trees, grafting of jack fruit and pest control measures in cashew.









## Swachh Bharat Abhiyan



Preparation of vermicompost from agriculture waste and Swachh Bharat Abhiyan activities were conducted in KVK, Dharwad during the month of April (19.04.2017), May (26.05.2017) and June (01.06.2017).

## Distribution of critical inputs of different FLDs/ OFTs and seed hub

Krishi Vigyan Kendra, Dharwad organized one day training programme on Integrated Crop management (ICM) in chilli on 03.06.2017, ICM in Onion on 07.06.2017 and ICM in Green gram and Black gram on 09.06.2017. During these training programme various critical inputs were distributed to farmers.







## Dignitaries visit to KVK

Dr. V.N. Sharada, Member of ASRB along with Dr. Sreenath Dixit, Director, ATARI (Zone-XI), Bengaluru and Dr. V. I. Benagi, Director of Extension, UAS, Dharwad visited KVK Dharwad on 03.04.2017 and reviewed the progress of KVK, Dharawd. He also visited progressive farmer and agricultural entrepreneur Shri Basavaraj Hucchhayyanavar's field at Chikkamalligwad village of Dharwad taluk and observed large scale Vermicompost production unit, Silk worm rearing unit and IFS models established in his field. Dr. S. M. Hiremath, Scientist (Horticulture), KVK, Dharwad and other scientists of KVK accompanied him. Dr. Raju M. Kurian and Dr. M. Sankaran, Scientist, Indian Institute of Horticultural Research, Bengaluru, visited the KVK farm on 12.04.2017









## Training for final year B.Sc. (Ag. Maco.) Students

Krishi Vigyan Kendra organized two trainings of one week duration for final year B.Sc. (Ag.Maco.) students, College of Agriculture, Dharwad (19.06.2017 to 24.06.17 and 26.06.17 to 01.07.2017 under Rural Agricultural Work Experience course 2017-18. During the training programme scientists of KVK, Dharwad, explained about KVK mandates, activities, OFT, FLD and improved agricultural practices. Students were participated in Swachh Bharat Abhiyan activities and also visited various demonstration units present at KVK, Dharwad.









**Editor & Publisher** : **Dr. S. M. Mantur**
Senior Scientist and Head
ICAR-Krishi Vigyan Kendra Dharwad

**Type Setting and Design** : **DTP Unit**
Publication Centre, UAS, Dharwad

**Associate Editors :**

**Dr. Jayashree Pattar**
**Mrs. Vinutha U. Muktamth**
**Dr. Prasanna Kumar B.H**
**Shri. C. J. Kumar**
**Smt. Shailaja N Galagali**
**Dr. Vijay Kumar.C**
**Dr. Akkamahadevi Agasimani**
**Kum. Kalavathi K. Kambali**

From,
**Senior Scientist and Head**
ICAR-Krishi Vigyan Kendra
Saidapur Farm, Dharwad 580 005
Karnataka, Telephone : 0836-2444272
E-mail : kvkdwd@uasd.in
Website : www.kvkdharwad.org
Facebook : Krishi Vigyan Kendra Dharwad

To,
______________________________
______________________________
______________________________
______________________________

**Book Post**

For free Kisan mobile advisory services, please call 0836-2444272 / visit www.kvkdharwad.org for registration



# ಕೃಷಿ ವಿಶ್ವವಿದ್ಯಾಲಯ, ಧಾರವಾಡ

## ಭಾ.ಕೃ.ಸಂ.ಮಂ.- ಕೃಷಿ ವಿಜ್ಞಾನ ಕೇಂದ್ರ

ಸೈದಾಪುರ ಫಾರ್ಮ, ಧಾರವಾಡ -580 005

ವಾರ್ತಾ ಪತ್ರ

ಸಂಪುಟ: 16 ಸಂಚಿಕೆ: 2 ಎಪ್ರೀಲ್-ಜೂನ್, 2017


## "ವಿಶ್ವ ಪರಿಸರ ದಿನಾಚರಣೆ"

ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು, ಸಿಬ್ಬಂದಿಗಳು ಹಾಗೂ ರೈತರು ಕಛೇರಿ ಆವರಣದಲ್ಲಿ ಹಲವಾರು ಹಣ್ಣಿನ ಮತ್ತು ಅರಣ್ಯ ಮರಗಳನ್ನು ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ದಿನಾಂಕ: 05.06.2017 ರಂದು ಆಚರಿಸಲಾಯಿತು. ಅದೇ ದಿನ ಡಾ. ಎಸ್.ಎಮ್. ಮಂಟೂರ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ, ಇವರು ಭಾರತ ಗ್ಯಾಸ್ ಘಟಕ, ಹುಬ್ಬಳ್ಳಿಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಪರಿಸರ ದಿನಾಚರಣೆಯ ಮಹತ್ವ ಕುರಿತು ಉಪನ್ಯಾಸ ನೀಡಿದರು..







## "ಅಂತರರಾಷ್ಟ್ರೀಯ ಯೋಗ ದಿನಾಚರಣೆ"





ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ 21 ಜೂನ್, 2017 ರಂದು ಯೋಗ ತರಬೇತಿ ಹಾಗೂ ಪ್ರಾತ್ಯಕ್ಷಿಕೆಯನ್ನು ಕೃಷಿ ವಿಜ್ಞಾನ ಕೇಂದ್ರದ ಕಛೇರಿ ಆವರಣದಲ್ಲಿ ಆಯೋಜಿಸಿಲಾಗಿತ್ತು. ಡಾ. ಜಯಶ್ರೀ ಕಲ್ಲೋಳಗಿ, ಯೋಗ ತಜ್ಞೆ ಇವರು ದೈನಂದಿನ ಜೀವನದಲ್ಲಿ ಯೋಗದ ಮಹತ್ವ ಕುರಿತು ತಿಳಿಸಿದರು. ಸಾಮಾನ್ಯವಾಗಿ ಜನರು ದಿನನಿತ್ಯ ಅನುಭವಿಸುವ ಒತ್ತಡ, ಆತಂಕ ಮತ್ತು ಸಕ್ಕರೆ ಖಾಯಿಲೆ, ರಕ್ತದ ಒತ್ತಡ, ಅಲರ್ಜಿ ಇತ್ಯಾದಿ ಸಮಸ್ಯೆಗಳ ನಿರ್ವಹಣೆಗಾಗಿ ಯೋಗ ಮುದ್ರೆ, ಆಸನಗಳು ಮತ್ತು ಪ್ರಾಣಾಯಾಮ ಕುರಿತು ಮಾಹಿತಿ ನೀಡಿದರು. ಅಲ್ಲದೇ ಇವರು ವಿದ್ಯಾರ್ಥಿಗಳು ಅನುಭವಿಸುವ ಪರೀಕ್ಷಾ ಒತ್ತಡ ಮತ್ತು ರೈತರು ಹಾಗೂ ಮಹಿಳೆಯರು ಅನುಭವಿಸುವ ಆರೋಗ್ಯ ತೊಂದರೆಗಳನ್ನು ಯೋಗದಿಂದ ಹೇಗೆ ನಿವಾರಿಸಬಹುದೆಂದು ತಿಳಿಸಿದರು. ಡಾ.ಎಸ್.ಎಂ. ಮಂಟೂರು, ಮುಖ್ಯಸ್ಥರು, ಕೃವಿಕೇಂ, ಧಾರವಾಡ ಇವರು ಯೋಗ ದಿನಾಚರಣೆಯ ಮಹತ್ವ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಧಾರವಾಡ ಹಾಗೂ ಸುತ್ತಮುತ್ತಲಿನ ಸುಮಾರು 20 ಮಹಿಳೆಯರು, ಕೃಷಿ ವಿಜ್ಞಾನ ಕೇಂದ್ರದಲ್ಲಿ ನಡೆಯುತ್ತಿದ ಕುರಿ ಹಾಗೂ ಆಡು ಸಾಕಾಣಿಕೆ ತರಬೇತಿಯಲ್ಲಿ ಭಾಗವಹಿಸಿದ 46 ರೈತರು, ಕೃಷಿ ಮಾರುಕಟ್ಟೆ ವಿಭಾಗದ 30 ವಿದ್ಯಾರ್ಥಿಗಳು ಯೋಗ ದಿನಾಚರಣೆಯಲ್ಲಿ ಭಾಗಹಿಸಿದ್ದರು. ಡಾ.ವಿನುತಾ ಯು ಮುಕ್ತಾಮಠ, ವಿಜ್ಞಾನಿಗಳು (ಗೃಹ ವಿಜ್ಞಾನ) ಇವರು ವಂದನಾರ್ಪಣೆ ಮಾಡಿದರು.

## "18ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆ"





ಕೃಷಿ ವಿಜ್ಞಾನ ಕೇಂದ್ರ, ಧಾರವಾಡದಲ್ಲಿ 18ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯನ್ನು ದಿ: 02.06.2017 ರಂದು ಆಯೋಜಿಸಲಾಗಿತ್ತು. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಮಾನ್ಯ ವಿಸ್ತರಣಾ ನಿರ್ದೇಶಕರಾದ ಡಾ. ವಿ.ಐ.ಬೆಣಗಿ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಕೇಂದ್ರದ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಐಸಿಎಆರ್ ಅಟಾರಿ (ವಲಯ-11), ನಿರ್ದೇಶಕರಾದ ಡಾ. ಶ್ರೀನಾಥ್ ದೀಕ್ಷಿತ್ ಇವರು 2016-17ನೇ ಸಾಲಿನಲ್ಲಿ ಕೆ.ವಿ.ಕೆ ಕೈಗೊಂಡ ಚಟುವಟಿಕೆಗಳನ್ನು ಪರಿಶೀಲಿಸಿದರು. ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರಾದ ಡಾ. ಎಸ್.ಎಮ್. ಮಂಟೂರರವರು 17ನೇ ವೈಜ್ಞಾನಿಕ ಸಲಹಾ ಸಭೆಯ ನಡಾವಳಿಗಳ ಮೇಲೆ ತೆಗೆದುಕೊಂಡ ಸಲಹೆ, ಕ್ರಮ ಹಾಗೂ ಪ್ರಗತಿ ವರದಿಯನ್ನು ವಿವರಿಸಿ ಪ್ರಸಕ್ತ ಸಾಲಿನ ಕ್ರಿಯಾ ಯೋಜನೆಯನ್ನು ಮಂಡಿಸಿದರು.ಸದರಿ ಸಭೆಯಲ್ಲಿ ವೈಜ್ಞಾನಿಕ ಸಲಹಾ ಸಮಿತಿ ಸದಸ್ಯರುಗಳಾದ ಕೃಷಿ ಮತ್ತು ಮೈತ್ರಿ ಇಲಾಖೆಗಳ ಅಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳು ಮತ್ತು ರೈತರು/ರೈತ ಮಹಿಳಾ ಪ್ರತಿನಿಧಿಗಳು ಸಕ್ರಿಯವಾಗಿ ಭಾಗವಹಿಸಿ ಸೂಕ್ತವಾದ ಸಲಹೆ ಮತ್ತು ಸೂಚನೆಗಳನ್ನು ನೀಡಿದರು.

## ಸಂರಕ್ಷಿತ ಕೃಷಿಯಲ್ಲಿ ಬೆಳೆಯುವ ಹೆಚ್ಚು ಮೌಲ್ಯವುಳ್ಳ ಬೆಳೆಗಳ ಕುರಿತು ತರಬೇತಿ

ದಿನಾಂಕ: 09.06.2017 ರಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ಕೇಂದ್ರ, ಧಾರವಾಡದಲ್ಲಿ "ಸಂರಕ್ಷಿತ ಕೃಷಿಯಲ್ಲಿ ಬೆಳೆಯುವ ಹೆಚ್ಚು ಮೌಲ್ಯವುಳ್ಳ ಬೆಳೆಗಳ" ಕುರಿತು ತರಬೇತಿಯನ್ನು ರೈತರಿಗೆ ಆಯೋಜಿಸಲಾಗಿತ್ತು. ಡಾ.ಎಸ್.ಎಮ್.ಮಂಟೂರ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೆ.ವಿ.ಕೆ., ಧಾರವಾಡ ಇವರು ಸಂರಕ್ಷಿತ ಕೃಷಿ ಪರಿಚಯ ಹಾಗೂ ಸಂರಕ್ಷಿತ ಕೃಷಿ ಪದ್ಧತಿಯಲ್ಲಿ ಜರ್ಬೆರಾ, ಕಾರ್ನೆಷನ್ ಮತು ಇತೆರೆ ಪ್ರಮುಖ ಹೂವಿನ ಬೆಳೆಗಳ ಬೇಸಾಯ ಕುರಿತು ಉಪನ್ಯಾಸ ನೀಡಿದರು. ಡಾ. ಎಸ್. ಎಮ್. ಬಿರಾದರ, ಸಹಾಯಕ ಪ್ರಾಧ್ಯಾಪಕರು, ಇವರು ಟೊಮ್ಯಾಟೋ, ಡೊಣ್ಣಮೆಣಸಿನಕಾಯಿ, ಬೀಜರಹಿತ ಸೌತೆ ಹಾಗೂ ವಿದೇಶೀಯ ತರಕಾರಿ ಬೆಳೆಗಳ ಬೇಸಾಯ ಕುರಿತು ಮಹಿತಿ ನೀಡಿದರು. ಕು. ಕಲಾವತಿ ಕಂಬಳಿ, ವಿಜ್ಞಾನಿಗಳು(ಕೃಷಿ ಕೀಟಶಾಸ್ತ್ರ) ಇವರು ಸಂರಕ್ಷಿತ ಕೃಷಿಯಲ್ಲಿ ಬರುವ ಕೀಟ ಮತ್ತು ರೋಗಗಳ ಕುರಿತು ತರಬೇತಿ ನೀಡಿದರು. ಶ್ರೀ ಶಿವಪ್ರಸಾದ, ರಿಜ್ವಾನ್ ಸೀಡ್ಸ್ , ನೆದರ್‌ಲ್ಯಾಂಡ್ ಮತ್ತು ಶ್ರೀ ಸಂತೋಷ ತೋರಗಲಮಠ, ಎಂ.ಡಿ, ಹರ್ಷರಾಜ ಅಗ್ರೋ ಪ್ರಾಡಕ್ಟ್ಸ್ ಪ್ರತಿನಿಧಿ ಇವರು ತಮ್ಮ ಸಂರಕ್ಷಿತ ಕೃಷಿಯಲ್ಲಿ ಬೆಳೆದ ಬೆಳೆಗಳ ಮರಾಟ ಕುರಿತು ಅನುಭವ ಹಂಚಿಕೊಂಡರು. ಈ ಸಂಧರ್ಭದಲ್ಲಿ ರೈತರಿಗೆ ಹೈಟೆಕ್ ಕೃಷಿ ವಿಭಾಗದ ಜಲ ಕೃಷಿ, ಏರೋಫೋನಿಕ್ಸ್, ಮಣ್ಣು ರಹಿತ ಕೃಷಿಯಲ್ಲಿ ಬೆಳೆದ ತರಕಾರಿಗಳು, ಆರ್ಕಿಡ್ಸ್ ಪ್ರಾತ್ಯಕ್ಷಿಕೆ ಘಟಕಗಳಿಗೆ ಭೇಟಿ ಮಾಡಿಸಲಾಯಿತು. ಇದಲ್ಲದೇ ಪಾಲಿ ಹೌಸ್‌ನಲ್ಲಿ ಬೆಳೆದ ಜರ್ಬೆರಾ ಮತ್ತು ಬೀಜರಹಿತ ಸವತೆ, ನೆರಳು ಮನೆಯಲ್ಲಿ ಬೆಳೆದ ಟೊಮೆಟೋ , ವಿದೇಶೀಯ ತರಕಾರಿಗಳು, ಪೋಲ್ ಬೀನ್ಸ್ ಮತ್ತು ಹೂವಿನ ಬೆಳೆಗಳಾದ ಹೆಲಿಕೋನಿಯಾ, ಬರ್ಡ್ ಆಫ್ ಪ್ಯಾರಡೈಸ್ ಮತ್ತು ಕೆಂಪು ಶುಂಠಿ ಬೆಳೆಗಳನ್ನು ವೀಕ್ಷಿಸಿ ಮಾಹಿತಿ ಪಡೆದರು. ಹನಿ ನೀರಾವರಿ ಮತ್ತು ಮಲ್ಚ್ (ಹೊದಿಕೆ)ನಲ್ಲಿ ಬೆಳೆದ ಸುಗಂಧರಾಜ ಹೂವಿನ ಬೇಸಾಯ ಪದ್ಧತಿಯ ಮಾಹಿತಿ ಪಡೆದರು. ಈ ತರಬೇತಿಯಲ್ಲಿ ಧಾರವಾಡ, ಗದಗ, ಬೆಳಗಾವಿ ಜಿಲ್ಲೆಗಳಿಂದ 50 ರೈತರು ಭಾಗವಹಿಸಿದ್ದರು.





## ಕುರಿ ಹಾಗೂ ಆಡು ಸಾಕಾಣಿಕೆ ತರಬೇತಿ

ಎರಡು ದಿನಗಳ ಕುರಿ ಹಾಗೂ ಆಡು ಸಾಕಾಣಿಕೆಯ ಶುಲ್ಕ ವಿಧಿಸಿದ ತರಬೇತಿಯನ್ನು ದಿ: 20–21 ಜೂನ್ 2017 ರಂದು ಕೃಷಿ ವಿಜ್ಞಾನ ಕೇಂದ್ರ ಧಾರವಾಡದಲ್ಲಿ ಏರ್ಪಡಿಸಲಾಗಿತ್ತು. ಈ ತರಬೇತಿಯಲ್ಲಿ 46 ರೈತರು ಅದರಲ್ಲಿಯೂ ಮುಖ್ಯವಾಗಿ ಯುವಕರು, ಉತ್ತರ ಕರ್ನಾಟಕದ 5 ಜಿಲ್ಲೆಗಳಿಂದ ಭಾಗವಹಿಸಿದ್ದರು. ಈ ತರಬೇತಿಯಲ್ಲಿ ಕುರಿ ಮತ್ತು ಆಡು ಸಾಕಾಣಿಕೆ ಮಹತ್ವ, ತಳಿಗಳ ಪರಿಚಯ, ಅಭಿವೃದ್ಧಿ ಹಾಗೂ ಮೌಲ್ಯಮಾಪನ, ಸಂತಾನೋತ್ಪತ್ತಿ, ವಸತಿ ಮತ್ತು ಆಹಾರದ ವ್ಯವಸ್ಥೆ, ಪಶು ಆಹಾರವಾಗಿ ಅಝೊಲ್ಲಾ ಬಳಕೆ, ಜಲಕೃಷಿಯ ಮೇವು ಮತ್ತು ಒಣ ಮೇವು ಪೌಷ್ಟೀಕರಣ, ವಿವಿಧ ರೋಗಗಳು, ಪ್ರಥಮ ಚಿಕಿತ್ಸೆ ಮತ್ತು ಲಸಿಕೆಗಳ ವೇಳಾಪಟ್ಟಿ ಮುಂತಾದ ವಿವಿಧ ವಿಷಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಡಾ. ವಿಶ್ವನಾಥ ಕುಲಕರ್ಣಿ, ಡಾ. ಜಾವೇದ್ ಮುಲ್ಲಾ, ಡಾ. ಅನಿಲಕುಮಾರ ಜಿ.ಕೆ, ಮತ್ತು ಡಾ. ಜಯಶ್ರೀ ಪತ್ತಾರ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ತರಬೇತಿ ನೀಡಿದರು. ಶ್ರೀಮತಿ ಶೀಲಾ ಬಂಢಾರಕರ್, ಡಿ.ಜಿ.ಎಂ. ನಬಾರ್ಡ ಮತ್ತು ಶ್ರೀ ಅಶೋಕ ಸಂಕಳ್ಳಿ, ಮ್ಯಾನೇಜರ್, ಕೆ.ವಿ.ಜಿ. ಬ್ಯಾಂಕ ಇವರು ರೈತರಿಗೆ ಬ್ಯಾಂಕಿನಿಂದ ದೊರೆಯುವ ಸೌಲಭ್ಯಗಳು ಹಾಗೂ ವಿಮೆ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ರೈತರಿಗೆ ಕೃಷಿ ವಿಶ್ವವಿದ್ಯಾಲಯ, ಧಾರಾವಾಡದ ಕುರಿ ಹಾಗೂ ಆಡು ಸಾಕಾಣಿಕೆ ಘಟಕ ಮತ್ತು ಮೇವು ತಯಾರಿಕೆ ಘಟಕ್ಕೆ ಕ್ಷೇತ್ರ ಭೇಟಿ ಏರ್ಪಡಿಸಲಾಗಿತ್ತು. ಮುಕ್ತಾಯ ಸಮಾರಂಭದಲ್ಲಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ. ಈಶ್ವರಚಂದ್ರ ಹೊಸಮನಿ ಇವರು ತರಬೇತಿದಾರರಿಗೆ ಪ್ರಮಾಣ ಪತ್ರ ವಿತರಿಸಿದರು.






## ಕೃಷಿಯಲ್ಲಿ ಶ್ರಮ ಕಡಿತಗೊಳಿಸುವ ಯಂತ್ರಗಳ ಕುರಿತು ತರಬೇತಿ

ಶೇಂಗಾ ಮತ್ತು ಹೆಸರು ಬೆಳೆಯಲ್ಲಿ ಶ್ರಮ ಕಡಿತಗೊಳಿಸುವ ತರಬೇತಿಯನ್ನು ದಿ: 29.06.2017 ರಂದು ಕೃಷಿ ವಿಜ್ಞಾನ ಕೇಂದ್ರ ಧಾರವಾಡದಲ್ಲಿ ಆಯೋಜಿಸಲಾಗಿತ್ತು. ಡಾ.ವಿನುತಾ ಯು ಮುಕ್ತಾಮಠ, ವಿಜ್ಞಾನಿಗಳು (ಗೃಹ ವಿಜ್ಞಾನ) ಇವರು ಕೃಷಿಯಲ್ಲಿ ವಿವಿದ ಉಪಕರಣಗಳನ್ನು ಉಪಯೋಗಿಸಿ ಶ್ರಮ ಕಡಿಮೆಗೊಳಿಸುವ ಪ್ರಾತ್ಯಕ್ಷಿಕೆಯನ್ನು ಹಾಗೂ ಡಾ. ಅನುರಾಜ (ಕೃಷಿ ಅಭಿಯಂತರು) ಕೃಷಿ ಯಂತ್ರೋಪಕರಣಗಳ ಬಗ್ಗೆ ವಿವರಿಸಿದರು. ಈ ತರಬೇತಿಯಲ್ಲಿ ಧಾರವಾಡ ಜಿಲ್ಲೆಯ 50 ಕ್ಕೂ ಹೆಚ್ಚಿನ ರೈತರು ಮತ್ತು ರೈತ ಮಹಿಳೆಯರು ಭಾಗವಹಿಸಿದ್ದರು.






## ಶೇಂಗಾ ಮತ್ತು ಸೋಯಾ ಅವರೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು ತರಬೇತಿ

ಶೇಂಗಾ ಮತ್ತು ಸೋಯಾ ಅವರೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು ತರಬೇತಿಯನ್ನು ದಿ: 30.05.2017 ರಂದು ಕೃಷಿ ವಿಜ್ಞಾನ ಕೇಂದ್ರ ಧಾರವಾಡದಲ್ಲಿ ಆಯೋಜಿಸಲಾಗಿತ್ತು. ಡಾ ಪ್ರಸನ್ನಕುಮಾರ ಬಿ. ಎಚ್ (ಬೇಸಾಯ ಶಾಸ್ತ್ರ) ಮತ್ತು ಶ್ರೀ ಕುಮಾರ ಸಿ.ಜೆ. ಕ್ಷೇತ್ರ ವ್ಯವಸ್ಥಾಪಕರು, ಕೆವಿಕೆ, ಧಾರವಾಡ ಇವರು ಬೀಜೋಪಚಾರ, ಕೀಟ, ರೋಗ ಮತ್ತು ಕಳೆ ನಿರ್ವಹಣೆ ಕುರಿತು ತರಬೇತಿ ನೀಡಿರುತ್ತಾರೆ. ಈ ತರಬೇತಿಯಲ್ಲಿ ಧಾರವಾಡ ಜಿಲ್ಲೆಯ 50 ಕ್ಕೂ ಹೆಚ್ಚಿನ ರೈತರು ಭಾಗವಹಿಸಿದ್ದರು.





## ಸಮಗ್ರ ಕೃಷಿ ಅಭಿಯಾನ 2017 ಮತ್ತು ಇತರೆ ಮುಂಗಾರು ಹಂಗಾಮಿನ ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳು ಮತ್ತು ರೈತರೊಂದಿಗಿನ ಚರ್ಚಾಗೋಷ್ಠಿ

ಗಂಜಿಗಟ್ಟಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಕೃಷಿ ಇಲಾಖೆ ಹಾಗೂ ಸರ್ಕಾರೇತರ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾದ ಸಮಗ್ರ ಕೃಷಿ ಅಭಿಯಾನದಲ್ಲಿ (22.06.2017) ಕೃಷಿ ವಿಜ್ಞಾನ ಕೇಂದ್ರ, ಧಾರವಾಡದ ವಿಜ್ಞಾನಿಗಳು ಕುಮಾರಿ ಕಲಾವತಿ ಕಂಬಳಿ (ವಿಜ್ಞಾನಿಗಳು ಕೀಟಶಾಸ್ತ್ರ) ಮತ್ತು ಡಾ. ಪ್ರಸನ್ನಕುಮಾರ ಬಿ. ಎಚ್. (ಬೇಸಾಯ ಶಾಸ್ತ್ರ) ಇವರುಗಳು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ರೈತರೊಂದಿಗೆ, ಬೀಜೋಪಚಾರ, ಕೀಟ, ರೋಗ ಮತ್ತು ಕಳೆ ನಿರ್ವಹಣೆ ಕುರಿತು ಚರ್ಚಿಸಿರುತ್ತಾರೆ. ದುಮ್ಮವಾಡ ಗ್ರಾಮದಲ್ಲಿ ಆಯೋಜಿಸಲಾದ ಸಮಗ್ರ ಕೃಷಿ ಅಭಿಯಾನದಲ್ಲಿ (24.06.2017) ಡಾ. ವಿನುತಾ ಮುಕ್ತಾಮಠ (ಗೃಹ ವಿಜ್ಞಾನ) ಭಾಗವಹಿಸಿ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಕುರಿತು ಮಾತನಾಡಿದರು. ಮಡಕಿಹೊನ್ನಿಹಳ್ಳಿ ಗ್ರಾಮದಲ್ಲಿ 28.06.2017 ರಂದು ನಡೆದ ಸಮಗ್ರ ಕೃಷಿ ಅಭಿಯಾನದಲ್ಲಿ ಡಾ. ಅಕ್ಕಮಹಾದೇವಿ ಅಗಸಿಮನಿ (ತೋಟಗಾರಿಕೆ ವಿಜ್ಞಾನಿ) ಮತ್ತು ಡಾ. ಜಯಶ್ರೀ ಪತ್ತಾರ (ಪಶು ವಿಜ್ಞಾನಿ) ಇವರು ಕೃಷಿ ವಿಜ್ಞಾನ ಕೇಂದ್ರದ ಚಟುವಟಿಕೆಗಳ ಕುರಿತು, ಆಧುನಿಕ ಕೃಷಿ ಪದ್ಧತಿ, ಮಣ್ಣು ರಹಿತ ಬೇಸಾಯ ಮತ್ತು ಮುಂಗಾರು ಹಂಗಾಮಿನಲ್ಲಿ ಬರುವಂತಹ ಪ್ರಾಣಿಗಳ ರೋಗ ನಿರ್ವಹಣೆ ಕುರಿತು ರೈತರೊಂದಿಗೆ ಸಂವಾದ ನಡೆಸಿರುತ್ತಾರೆ. ದುಮ್ಮವಾಡ ಗ್ರಾಮದಲ್ಲಿ ಆಯೋಜಿಸಲಾದ ರೈತರೊಂದಿಗಿನ ಚರ್ಚಾಗೋಷ್ಠಿಯಲ್ಲಿ ಕೆವಿಕೆ ವಿಜ್ಞಾನಿಗಳಾದ ಡಾ. ವಿಜಯಕುಮಾರ ಸಿ (ಮಣ್ಣು ವಿಜ್ಞಾನ) ಕುಮಾರಿ ಕಲಾವತಿ ಕಂಬಳಿ, ಡಾ. ಜಯಶ್ರೀ ಪತ್ತಾರ ಮತ್ತು ಡಾ. ಪ್ರಸನ್ನಕುಮಾರ ಬಿ. ಎಚ್. ಭಾಗವಹಿಸಿ ರೈತರೊಂದಿಗೆ ಸಾವಯವ ಕೃಷಿ, ನೀರು ಸಂಗ್ರಹಣೆ ಮತ್ತು ಮಣ್ಣಿನ ಪೋಷಕಾಂಶಗಳು, ಕೀಟ ನಿರ್ವಹಣೆ, ಪ್ರಾಣಿಗಳಲ್ಲಿ ಕಾಲು ಬಾಯಿ ಬೇನೆ ಮತ್ತು ಕೆಚ್ಚಲು ಬಾವು ಹಾಗೂ ರೈತರ ಇತರೆ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಕರ್ನಾಟಕ ಮಾವು ಅಭಿವೃದ್ಧಿ ಮಂಡಳಿ ಮತ್ತು ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾದ ಅಲ್ಫಾನ್ಸೋ ಮಾವು ಬೇಸಾಯ (30.05.2017) ಕುರಿತು ರೈತರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಕುಮಾರಿ ಕಲಾವತಿ ಕಂಬಳಿ ಮತ್ತು ಡಾ. ಜಯಶ್ರೀ ಪತ್ತಾರ ಭಾಗವಹಿಸಿದ್ದರು.









## ವಿಶ್ಲೇಷಣಾತ್ಮಕ ತಾಕುಗಳಿಗೆ ಬೇಟಿ

ಧಾರವಾಡ ತಾಲೂಕಿನ ಬೆಳ್ಳಿಗಟ್ಟಿ ಗ್ರಾಮದ ಸಮಸ್ಯಾತ್ಮಕ ಮಾವು, ಗೋಡಂಬಿ ಮತ್ತು ಹಲಸಿನ ತಾಕುಗಳಿಗೆ ಡಾ. ಎಸ್.ಎಮ್.ಮಂಟೂರ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ, ಡಾ. ಅಕ್ಕಮಹಾದೇವಿ ಅಗಸಿಮನಿ (ವಿಜ್ಞಾನಿಗಳು ತೋಟಗಾರಿಕೆ) ಹಾಗು ಕುಮಾರಿ ಕಲಾವತಿ ಕಂಬಳಿ (ವಿಜ್ಞಾನಿಗಳು ಕೀಟಶಾಸ್ತ್ರ) ಬೇಟಿ ಮಾಡಿ ಸೂಕ್ತ ಮಾಹಿತಿ ನೀಡಿರುತ್ತಾರೆ, ಅದಲ್ಲದೆ ಮಾವು ಚಾಟನಿ ಮಾಡಿಸುವುದು, ಹಲಸಿನ ಕಸಿ ಕಟ್ಟಿಸುವುದು, ಕೀಟ ಮತ್ತು ರೋಗಗಳ ನಿಯಂತ್ರಣ ಕುರಿತು ಮಾಹಿತಿ ನೀಡಲಾಯಿತು.









## ಸ್ವಚ್ಛ ಭಾರತ ಅಭಿಯಾನ

ಕೃಷಿ ತ್ಯಾಜ್ಯ ವಸ್ತುಗಳಿಂದ ಎರೆಗೊಬ್ಬರ ಮತ್ತು ವಿವಿಧ ಸ್ವಚ್ಛತಾ ಚಟುವಟಿಕೆಗಳನ್ನು ಕೃಷಿ ವಿಜ್ಞಾನ ಕೇಂದ್ರ, ಧಾರವಾಡದಲ್ಲಿ 19 ಎಪ್ರೀಲ್, 26 ಮೇ ಮತ್ತು 01 ಜೂನ್, 2017 ರಂದು ಹಮ್ಮಿಕೊಳ್ಳಲಾಗಿತ್ತು.





## ವಿವಿಧ ಮುಂಚೂಣಿ ಪ್ರಾತ್ಯಕ್ಷಿಕೆ, ಕ್ಷೇತ್ರ ಪ್ರಯೋಗ ಹಾಗೂ ಬೀಜೋತ್ಪಾದನೆ ಪರಿಕರಗಳ ವಿತರಣೆ

ಕೃಷಿ ವಿಜ್ಞಾನ ಕೇಂದ್ರ, ಧಾರವಾಡದಲ್ಲಿ ದಿ: 30.05.2017 ರಂದು ಮೆಣಸಿನಕಾಯಿ (03.06.2017), ಈರುಳ್ಳಿ (07.06.2017), ಹೆಸರು ಮತ್ತು ಉದ್ದಿನ ಬೆಳೆಯಲ್ಲಿ ಸಮಗ್ರ ಕೃಷಿ ಪದ್ಧತಿ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮಗಳಲ್ಲಿ ವಿವಿಧ ಪರಿಕರಗಳನ್ನು ರೈತರಿಗೆ ವಿತರಿಸಲಾಯಿತು.







## ಕೃಷಿ ವಿಜ್ಞಾನ ಕೇಂದ್ರಕ್ಕೆ ಗಣ್ಯರ ಭೇಟಿ

ASRB ಸದಸ್ಯರಾದ ಡಾ.ವಿ.ಎನ್. ಶಾರದಾ ಅವರ ಜೊತೆ ATARI (Zone-XI) ನಿರ್ದೇಶಕರಾದ ಡಾ.ಶ್ರೀನಾಥ ದೀಕ್ಷಿತ್ ಮತ್ತು ವಿಸ್ತರಣಾ ನಿರ್ದೇಶಕರು ಡಾ. ವಿ.ಐ. ಬೆಣಗಿ, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ಕೃಷಿ ವಿಜ್ಞಾನ ಕೇಂದ್ರ, ಧಾರವಾಡಕ್ಕೆ ದಿ: 03.04.2017 ರಂದು ಭೇಟಿ ನೀಡಿ ಕೇಂದ್ರದ ಪ್ರಗತಿಯನ್ನು ಪರಿಶೀಲಿಸಿದರು. ನಂತರ ಪ್ರಗತಿಪರ ರೈತ ಹಾಗೂ ಕೃಷಿ ಉದ್ಯಮಗಾರರಾದ ಶ್ರೀ ಬಸವರಾಜ ಹುಚ್ಚಯ್ಯನವರು ಇವರ ಕ್ಷೇತ್ರಕ್ಕೆ ಭೇಟಿ ನೀಡಿ ಎರೆಹುಳು ಘಟಕ, ರೇಷ್ಮೆ ಸಾಕಾಣಿಕೆ ಕೇಂದ್ರ ಹಾಗೂ ಸಮಗ್ರ ಕೃಷಿ ಪದ್ಧತಿ ತಾಕನ್ನು ವೀಕ್ಷಿಸಿದರು. ಕೇಂದ್ರದ ವಿಜ್ಞಾನಿಗಳಾದ ಡಾ. ಎಸ್.ಎಮ್. ಹಿರೇಮಠ ಇವರು ಗಣ್ಯರ ಜೊತೆಯಲ್ಲಿ ಭೇಟಿ ನೀಡಿದರು. ಭಾರತೀಯ ತೋಟಗಾರಿಕಾ ಸಂಶೋಧನಾ ಕೇಂದ್ರದ ವಿಜ್ಞಾನಿಗಳಾದ ಡಾ. ರಾಜು ಎಮ್. ಕುರಿಯನ್ ಮತ್ತು ಡಾ.ಎಮ್.ಸಂಕರನ್‌ರವರು ಕೇಂದ್ರದ ಮಾವಿನ ತಾಕುಗಳಿಗೆ ದಿ: 12.04.2017 ರಂದು ಭೇಟಿ ನೀಡಿದರು.









## ಅಂತಿಮ ವರ್ಷದ ಬಿಎಸ್ಸಿ (Ag. Maco.) ವಿದ್ಯಾರ್ಥಿಗಳಿಗೆ ತರಬೇತಿ

ಕೃಷಿ ಮಹಾವಿದ್ಯಾಲಯ, ಧಾರವಾಡದ ಅಂತಿಮ ವರ್ಷದ ಬಿ.ಎಸ್ಸಿ (Ag. Maco.) ವಿದ್ಯಾರ್ಥಿಗಳಿಗೆ ಒಂದು ವಾರದ ಎರಡು ತರಬೇತಿಗಳನ್ನು ಕೃಷಿ ವಿಜ್ಞಾನ ಕೇಂದ್ರ, ಧಾರವಾಡದಲ್ಲಿ ದಿ: 19.06.17 ರಿಂದ 24.06.2017 ಮತ್ತು 26.06.2017 ರಿಂದ 01.07.2017 ರವರೆಗೆ ಗ್ರಾಮೀಣ ಕೃಷಿ ಅನುಭವ ಕಲಿಕೆ 2017–18 ಕೋರ್ಸ್‌ನಡಿಯಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಕೇಂದ್ರದ ಕಾರ್ಯ ಚಟುವಟಿಕೆಗಳು, ಮುಂಚೂಣಿ ಪ್ರಾತ್ಯಕ್ಷಿಕೆ, ಕ್ಷೇತ್ರ ಪ್ರಯೋಗಗಳು ಮತ್ತು ಸುಧಾರಿತ ಕೃಷಿ ಪದ್ಧತಿಗಳ ಬಗ್ಗೆ ವಿಜ್ಞಾನಿಗಳು ಮಾಹಿತಿ ನೀಡಿದರು. ವಿದ್ಯಾರ್ಥಿಗಳು ಸ್ವಚ್ಛ ಭಾರತ ಅಭಿಯಾನ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು ಹಾಗೂ ವಿವಿಧ ಪ್ರಾತ್ಯಕ್ಷಿಕೆ ಘಟಕಗಳಿಗೆ ಭೇಟಿ ನೀಡಿದರು.










ಸಂಪಾದಕರು ಹಾಗೂ ಪ್ರಕಾಶಕರು : ಡಾ. ಎಸ್. ಎಮ್. ಮಂಟೂರ
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

ಅಕ್ಷರ ಜೋಡಣೆ ಮತ್ತು ವಿನ್ಯಾಸ : ಡಿಟಿಪಿ, ಘಟಕ
ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ

ಸಹ ಸಂಪಾದಕರು

ಡಾ. ಜಯಶ್ರೀ ಪತ್ತಾರ
ಕು. ಕಲಾವತಿ ಕು. ಕಂಬಳಿ
ಡಾ. ಪ್ರಸನ್ನಕುಮಾರ ಬಿ.ಚ್
ಶ್ರೀ ಸಿ. ಜೆ. ಕುಮಾರ
ಡಾ. ವಿಜಯಕುಮಾರ ಸಿ.
ಡಾ. ಅಕ್ಕಮಹಾದೇವಿ ಅಣಸಿಮನಿ
ಶ್ರೀಮತಿ. ವಿನುತಾ ಮುಕ್ತಾಮಠ
ಶ್ರೀಮತಿ ಶೈಲಜಾ ಎನ್ ಗಲಗಲಿ



ಇಂದ,
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಭಾ.ಕೃ.ಸಂ.ಮಂ.–ಕೃಷಿ ವಿಜ್ಞಾನ ಕೇಂದ್ರ
ಸೈದಾಪುರ ಫಾರ್ಮ್, ಧಾರವಾಡ 580 005
ಕರ್ನಾಟಕ, ದೂರವಾಣಿ : 0836–2444272
ಮಿಂಚಂಚೆ : kvkdwd@uasd.in
ವೆಬ್‌ಸೈಟ್ : www.kvkdharwad.org
ಫೇಸ್‌ಬುಕ್ : Krishi Vigyan Kendra Dharwad


ಗೆ,

______________________

______________________

______________________

______________________

ತೆರೆದ ಅಂಚೆ

For free Kisan mobile advisory services, please call 0836-2444272 / visit www.kvkdharwad.org for registration

